# IN THE COURT OF THE ADDL. SENIOR CIVIL JUDGE & JMFC., GUBBI

# OS - 130/2024

Witness present and duly sworn on : 03-07-2026

Further Cross Examination: by Counsel for Defendant No. 1 to 4 :

ನನ್ನ ತಂದೆ ಕರಿಯಪ್ಪ ರವರು ಇಬ್ಬರು ಅಣ್ಣ ತಮ್ಮಂದಿರು ಮತ್ತು ನನ್ನ ತಂದೆಯ ಅಣ್ಣನ ಹೆಸರು ಸಂಜೀವಪ್ಪ . ನನ್ನ ತಾತ ಗಿರಿಯಪ್ಪನವರು ಅವರಿಗೆ ಬಂದ ಆಸ್ತಿಯಲ್ಲಿ ಸಂಜೀವಪ್ಪರವರಿಗೆ ಬಾಗ ನೀಡಿದ್ದಾರೆ ಎಂದರೆ ಸರಿ . ಕಚ್ಚೇನಹಳ್ಳಿ ಗ್ರಾಮದ ಸರ್ವೆ ನಂ 31 ರಲ್ಲಿ 25 ½ ಗುಂಟೆ , ಸರ್ವೆ ನಂ 30/4 ರಲ್ಲಿ 1 ಎಕರೆ 32 ಗುಂಟೆ , ಸರ್ವೆ ನಂ 40 ರಲ್ಲಿ 2 ಎಕರೆ 6 ½ ಗುಂಟೆ , ಸರ್ವೆ ನಂ 38 ರಲ್ಲಿ 1 ಎಕರೆ 9 ಗುಂಟೆ , ಸರ್ವೆ ನಂ 39/4 ರಲ್ಲಿ 35 ಗುಂಟೆ ಜಮೀನುಗಳು ನನ್ನ ದೊಡ್ಡಪ್ಪ ಸಂಜೀವಪ್ಪರವರ ಬಾಗಕ್ಕೆ ಬಂದಿದೆ ಎಂದರೆ ಸರಿ . ಸಂಜೀವಪ್ಪ ಮತ್ತು ನನ್ನ ತಂದೆ ಯಾವಾಗ ವಿಬಾಗ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಮತ್ತು ನನ್ನ ದೊಡಪ್ಪನಿಗೆ ನನ್ನ ತಾತ ನೀಡಿದ ಆಸ್ತಿಗಳು ಸೇರಿ ನನ್ನ ತಾತನಿಗೆ ಕಚ್ಚೇನಹಳ್ಳಿ ಗ್ರಾಮದಲ್ಲಿ ಒಟ್ಟು 14 ½ ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ನನ್ನ ತಾತನಿಗೆ ಕಚ್ಚೇನಹಳ್ಳಿ ಗ್ರಾಮದಲ್ಲಿ ಸುಮಾರು 10 ಎಕರೆ ಜಮೀನು ಇತ್ತು . ಗಡಿಅಂಕನಹಳ್ಳಿ ಗ್ರಾಮದಲ್ಲಿ ನನ್ನ ತಾತನಿಗೆ ಸುಮಾರು 14 ಎಕರೆ ಜಮೀನು ಇತ್ತು . ಸದರಿ 10 ಮತ್ತು 14 ಎಕರೆ ಜಮೀನು ನನ್ನ ತಾತನಿಗೆ ಅವರ ಅಣ್ಣ ತಮ್ಮಂದಿರ ಬಾಗದಲ್ಲಿ ಬಂದಿದ್ದ ಆಸ್ತಿಗಳು ಎಂದರೆ ಅದರಲ್ಲಿ ನನ್ನ ತಾತನಿಗೆ ಸೇರಿರುವ ಸ್ವಯಾರ್ಜಿತ ಆಸ್ತಿಗಳು ಇವೆ. ಸಾಕ್ಷಿ ಮುಂದುವರೆದು ದಾವಾ ಆಸ್ತಿಗಳು ನನ್ನ ತಾತನ ಸ್ವಯಾರ್ಜಿತ ಆಸ್ತಿಗಳಾಗಿವೆ.

ಕ್ರಯಪತ್ರಗಳ ಅಡಿಯಲ್ಲಿ ನನ್ನ ತಾತನಿಗೆ ಸುಮಾರು 9 ಎಕರೆ ಜಮೀನು ಬಂದಿರುತ್ತದೆ. ಸದರಿ 9 ಎಕರೆ ಜಮೀನಿನ ಕ್ರಯ ಪತ್ರಗಳನ್ನು ನಾನು ಹಾಜರುಪಡಿಸಿದ್ದೇನೆ. ನನ್ನ ತಾತನಿಗೆ ಸುಮಾರು 13 ಎಕರೆ ಪಿತ್ರಾರ್ಜಿತ ಆಸ್ತಿ ಬಂದಿತು ಎಂದರೆ ಸರಿ . ಸದರಿ ಪಿತ್ರಾರ್ಜಿತ ಆಸ್ತಿಗಳಲ್ಲಿ ನನ್ನ ತಾತ ಬೆಳೆ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾತ 1936-37 ರಲ್ಲಿ ಕ್ರಯ ಪತ್ರಗಳ ಮೂಲಕ ಆಸ್ತಿ ಖರೀದಿ ಮಾಡಿದ್ದಾರೆ . ಸದರಿ ಸಮಯದಲ್ಲಿ ನನ್ನ ತಂದೆ

ಜನಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1940 -45 ರಲ್ಲಿ ನನ್ನ ತಂದೆ ಜನಿಸಿದ್ದಾರೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ಈಗ ನನ್ನ ತಂದೆಗೆ ಸುಮಾರು 88-90 ವರ್ಷ ವಯಸ್ಸಾಗಿದೆ. ಕ್ರಯ ಪತ್ರದ ಸಮಯದಲ್ಲಿ ನನ್ನ ತಂದೆ ಸುಮಾರು 1 ವರ್ಷದ ಮಗು ಎಂದರೆ ಸುಮಾರು 10-15 ವರ್ಷ ದ ಹುಡುಗನಾಗಿರಬಹುದು. ದಾವೆಯನ್ನು ಸಲ್ಲಿಸಿದಾಗ ನನ್ನ ತಂದೆಯ ವಯಸ್ಸನ್ನು 85 ವರ್ಷ ವಯಸ್ಸು ಎಂದು ನಮೂದು ಮಾಡಿರುತ್ತೇನೆ. ವಾದ ಪತ್ರದಲ್ಲಿ ನನ್ನ ತಂದೆಯ ವಯಸ್ಸನ್ನು 83 ವರ್ಷ ಎಂದು ನಮೂದು ಮಾಡಿದ್ದೇನೆ. ಆದ ಕಾರಣ ನನ್ನ ತಂದೆ 1940-45 ರಲ್ಲಿ ಜನಿಸಿರಲಿಲ್ಲ ಆದರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸುವಯದಲ್ಲಿ ನನ್ನ ತಂದೆ ಜನಿಸಿರಲಿಲ್ಲ ಆದ ಕಾರಣ ನನ್ನ ತಾತ ಮಾಡಿದ ವ್ಯವಹಾರದ ಮಾಹಿತಿ ನನ್ನ ತಂದೆಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಪಿತ್ರಾರ್ಜಿತವಾದ ಆಸ್ತಿಯಲ್ಲಿ ಅವರು ಬೆಳೆಯುತ್ತಿದ್ದ ಬೆಳೆಗಳ ಮಾಹಿತಿ ನನ್ನ ತಂದೆಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಪಿತ್ರಾರ್ಜಿತ ಆಸ್ತಿಯ ಅದಾಯದಿಂದ ಖರೀದಿ ಮಾಡಿದ್ದು ಸ್ವಂತ ಆದಾಯ ಇರಲಿಲ್ಲ ಎಂದರೆ ಪಿತ್ರಾರ್ಜಿತ ಆಸ್ತಿ ಬಂಜರು ಬೂಮಿ ಆಗಿದ್ದು ನನ್ನ ತಾತ ಕಾಯಿಯ ವ್ಯಪಾರದ ಸಂಪಾದನೆಯಿಂದ ಆಸ್ತಿಯನ್ನು ಮಾಡಿದ್ದರು. ಕಾಯಿಯ ವ್ಯಪಾರದ ಉಳಿದ ಹಣದಿಂದ ಆಸ್ತಿ ಖರೀದಿ ಮಾಡಿದ್ದಾರೆ .

ದಾನ ಪತ್ರವು 2024 ರಲ್ಲಿ ಆಗಿದೆ. 2021 ರಲ್ಲಿ ಗುಬ್ಬಿಯ ಸಿವಿಲ್ ನ್ಯಾಯಾಲಯದ FDP 5/2019 ರಲ್ಲಿ ಆಸ್ತಿಗಳು ಅಳತೆ ಮಾಡಿ ವಿಬಾಗ ಮಾಡಿದ್ದಾರೆ ಎಂದರೆ ಅದನ್ನು ಪ್ರಶ್ನಿಸಿರುತ್ತೇನೆ. 2021 ರಲ್ಲಿ ಆಸ್ತಿಗಳನ್ನು ನನ್ನ ತಾತ ಖರೀದಿ ಮಾಡಿದ್ದರು ಎಂದು ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ತಂದೆಗೆ ನನ್ನ ತಾತನ ಪಿತ್ರಾರ್ಜಿತ ಆಸ್ತಿ ಎಂದು ಮಾಹಿತಿ ಇದ್ದರೆ 2021 ರಲ್ಲಿ ತಕರಾರು ಸಲ್ಲಿಸುತ್ತಿದ್ದೆವು ಎಂದರೆ ಅದನ್ನು ಮೇಲ್ಮವಿಯಲ್ಲಿ ಪ್ರಶ್ನಿಸಿರುತ್ತೇವೆ. ಮೇಲ್ಮನವಿಯಲ್ಲಿ ನನ್ನ ತಾತನ ಸ್ವಯಾರ್ಜಿತ ಆಸ್ತಿ ಆದ ಕಾರಣ ವಿಬಾಗ ಆಗಿರುವುದು ತಪ್ಪು ಎಂದು ಅರ್ಜಿ ಸಲ್ಲಿಸಿದ್ದೀರಾ ಎಂದರೆ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸದರಿ ವಿಷಯವನ್ನು ಮೇಲ್ಮನವಿಯಲ್ಲಿ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವುಗಳು ನನ್ನ ತಾತನ ಸ್ವಯಾರ್ಜಿತ ಆಸ್ತಿಗಳು ಆಗಿದ್ದು ನನ್ನ ತಂದೆಗೆ

ಬಂದಿರುತ್ತದೆ. ಈ ದಾವೆಯ ಪೂರ್ವದಲ್ಲಿ ನಡೆದ ಪ್ರಕರಣಗಳನ್ನು ನನ್ನ ತಾತನ ಸ್ವಯಾರ್ಜಿತ ಆಸ್ತಿ ಎಂದು ನಾನು ಮತ್ತು ನನ್ನ ತಂದೆ ಹೇಳಿಲ್ಲ ಎಂದರೆ RSA No. 376/2019 ರಲ್ಲಿ ಹೇಳಿರುತ್ತೇವೆ.

ದಾವಾ ಆಸ್ತಿಗಳು ಮತ್ತು ಇತರೆ ಪಿತ್ರಾರ್ಜಿತ ಆಸ್ತಿಗಳನ್ನು ನಾನು , ನನ್ನ ತಂದೆ ಹಾಗೂ ಸಹೋದರಿಯರು ಒಟ್ಟಿಗೆ ಅನುಬವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿ . ಒಟ್ಟಿಗೆ ಅನುಬವಿಸಿಕೊಂಡು ಬರುತ್ತಿದ್ದ ಆಸ್ತಿಗಳಲ್ಲಿ ವಿಬಾಗ ಆಗಿದೆ ಎಂದರೆ ಆಸ್ತಿಗಳು ನನ್ನ ತಂದೆಯ ಒಡೆತನದಲ್ಲಿರುತ್ತದೆ. ದಿಃ 03-04-2024 ರಂದು ದಾನ ಪತ್ರ ಮಾಡಿಕೊಡಲು ನನ್ನ ತಂದೆಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 2024 ರಲ್ಲಿ ನನ್ನ ತಂದೆಯ ವಯಸ್ಸು 83 ವರ್ಷ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ . ದಾನ ಪತ್ರದಂತೆ ನನ್ನ ತಂದೆಗೆ 83 ವರ್ಷ ವಯಸ್ಸು ಎಂದರೆ ಹೆಚ್ಚು ಕಡಿಮೆ ಇರುತ್ತದೆ. ನನ್ನ ತಂದೆಗೆ 83 ವರ್ಪ ವಯಸ್ಸಾಗಿದ್ದ ಕಾರಣ ಅವರಿಗೆ ಜ್ಞಾಪಕ ಶಕ್ತಿ ಮತ್ತು ಬುದ್ದಿಶಕ್ತಿ ಕಡಿಮೆ ಇತ್ತು ಎಂದರೆ ಸರಿಯಲ್ಲ. ಆದ ಕಾರಣ ನನ್ನ ತಂದೆಯು ದಾನ ಪತ್ರದಲ್ಲಿ ಬರೆಸಿರುವ ವಿಚಾರ ಅವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾನ ಪತ್ರ ಬರೆಯಲು ನನ್ನ ತಂದೆಗೆ ಹಕ್ಕು ಇಲ್ಲದೇ ಇದ್ದ ಕಾರಣ ಅದರ ಆದಾರದ ಮೇರೆಗೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾನ ಪತ್ರದಲ್ಲಿ ನಮೂದು ಆಗಿರುವ ವಿಚಾರಗಳು ನನಗೆ ಗೊತ್ತಿದೆ. ದಾನ ಪತ್ರದ ಆಸ್ತಿಗಳಲ್ಲಿ ನನ್ನ ತಂದೆ ಅವರೊಬ್ಬರೆ ಸ್ವಾದೀನ ಇರದೇ ಇದ್ದ ಕಾರಣ ಅವರು ನನಗೆ ದಾನ ಪತ್ರಗಳ ಆಸ್ತಿಗಳ ಸ್ವಾದೀನವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾನ ಪತ್ರದಲ್ಲಿ ಆಸ್ತಿಗಳ ಸ್ವಾದೀನ ಕೊಟ್ಟಿರುವ ಬಗ್ಗೆ ನಮೂದು ಇದೆ. ನನ್ನ ತಂದೆ ದಾನ ಪತ್ರದ ಆಸ್ತಿಗಳ ಸ್ವಾದೀನದಲ್ಲಿ ಇರಲಿಲ್ಲ ಹಾಗೂ ನಾನು ಸಹ ಸದರಿ ಆಸ್ತಿಗಳ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. FDP No. 5/2019 ಅಳತೆಯ ಆದೇಶದಂತೆ 1 ರಿಂದ 4 ನೇ ಪ್ರತಿವಾದಿಗಳು ಅವರಿಗೆ ಬಂದಿರುವ ಆಸ್ತಿಗಳಲ್ಲಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈ ದಾವೆ ಹಾಕುವ ಪೂರ್ದಲ್ಲಿ ದಾನ ಪತ್ರ್ವವನ್ನು ಸೃಷ್ಟಸಿದ್ದೇನೆ ಎಂದರೆ ಸರಿಯಲ್ಲ. ದಾವೆ ಹಾಕುವ ಕಾರಣಕ್ಕೆ ದಾನಪತ್ರ ಸೃಷ್ಟಿಸಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(Further cross examination deferred at the request of counsel for the defendant No.1 to 4 )

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi